ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 3, July-August 2025, Pp. 42-52
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಕನ್ನಡದ ಅತ್ಯುತ್ತಮ ಪ್ರೇಮ ಕಥೆಗಳು : ಮರು ಚಿಂತನೆ

**ಶಿವರಾಜು ಎನ್**
ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳ್ಳಿ ತೀರ್ಥಹಳ್ಳಿ ತಾಲೂಕು, ಶಿವಮೊಗ್ಗ ಜಿಲ್ಲೆ.

***Abstract:***
*ಮನುಷ್ಯ ಭಾವನಾತ್ಮಕ ಜೀವಿ. ಆತ ಭಾವನೆಗಳಿಲ್ಲದೆ ಬದುಕಲಾರ. ಪ್ರಪಂಚದಲ್ಲಿ ಮನುಷ್ಯನ ಅಸ್ತಿತ್ವ ನಿಂತಿರುವುದೇ ಪ್ರೀತಿಯ ಮೇಲೆ. ಮನುಷ್ಯ ಸುಖ, ಸಂತೋಷದಿಂದ ಬಾಳಲು ಅತಿ ಅಗತ್ಯವಾದ ಭಾವನೆಗಳಲ್ಲಿ ಪ್ರೀತಿ ಬಹಳ ಮುಖ್ಯವಾದ ಭಾವನೆ. "ಮಾನವ ಜನ್ಮ ದೊಡ್ಡದು, ಇದು ಹಾಳು ಮಾಡಿಕೊಳ್ಳಬೇಡಿರೋ ಹುಚ್ಚಪ್ಪಗಳಿರಾ" ಎನ್ನುವ ಪುರದಂದರ ದಾಸರ ವಾಣಿಯಂತೆ, ಮನುಷ್ಯನಾದವನಿಗೆ ತನ್ನ ಜೀವನದ ಮೇಲೆ ಅಪಾರವಾದ ಪ್ರೇಮವಿರಬೇಕು. ಮನುಷ್ಯ ಮೊದಲು ತನ್ನ ಕುಟುಂಬದವರ ಪ್ರೀತಿ ಗಳಿಸಬೇಕು, ಕುಟುಂಬದವರ ಪ್ರೀತಿ, ವಿಶ್ವಾಸ ಕಳೆದುಕೊಂಡ ವ್ಯಕ್ತಿ ನಿಜವಾಗಿ ತಬ್ಬಲಿಯಾಗುತ್ತಾನೆ. ಮನುಷ್ಯನಿಗೆ ತನ್ನ ಜೀವನದ ಮೇಲೆ ಪ್ರೀತಿ ಇರಬೇಕು ನಿಜ, ಆದರೆ ಅದು ಸ್ವಾರ್ಥವಾಗಬಾರದು. ಪ್ರಸ್ತುತ ಲೇಖನದಲ್ಲಿ ಕನ್ನಡದ ಅತ್ಯುತ್ತಮ ಪ್ರೇಮ ಕಥೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.*

***Keywords:*** *ಕನ್ನಡ ಸಾಹಿತ್ಯ, ಕಥೆಗಳು, ಪ್ರೀತಿ, ಪ್ರೇಮ ಕಥೆ, ಭಾವನೆ, ಆಕರ್ಷಣೆ*

**ಪೀಠಿಕೆ**

ಪ್ರೀತಿ ಎಂಬುದು ಗುರುತಿಸಲಾಗದ ಅಮೂರ್ತಭಾವನೆ. ಪ್ರೀತಿ ಎನ್ನುವುದು ಕಲೆಯಲ್ಲಿ ಅದು ಕೇವಲ ಒಂದು ಸುಖಕರವಾದ ಸಂವೇದನೆ. ಅದನ್ನು ಅನುಭವಿಸುವುದು ನಮ್ಮ ಅದೃಷ್ಟವನ್ನು ಅವಲಂಬಿಸಿರುವ ಆಕಸ್ಮಿಕ ಎನ್ನುವುದಾದರೆ ಆಗ ಪ್ರೀತಿಯಲ್ಲಿ ಕಲಿಯಬೇಕಾದದ್ದು ಏನೂ ಇಲ್ಲ. ಬಹುಪಾಲು ಜನರಿಗೆ ಪ್ರೀತಿ ಒಂದು ಕಲೆಯಲ್ಲ. ಜನರು ಯಾವಾಗಲೂ ಪ್ರೀತಿಗಾಗಿ ಹಂಬಲಿಸುತ್ತಾರೆ. ಜನ ಪ್ರೀತಿಯ ಬರಗಾಲದಲ್ಲಿ ಬದುಕಿದ್ದಾರೆ. ಸುಖಮಯವಾದ ಅಥವಾ ದುಃಖಮಯವಾದ ಪ್ರೇಮ ಕಥೆಗಳನ್ನು ಹೊಂದಿರುವ ನೂರಾರು ಚಲನಚಿತ್ರಗಳನ್ನು ಅವರು ನೋಡುತ್ತಲೇ ಇರುತ್ತಾರೆ. ಪ್ರೀತಿಯೆಂಬ ಕೇಂದ್ರ ಬಿಂದುವಿನ ಸುತ್ತ ತಿರುಗುವ ಕೆಲಸಕ್ಕೆ ಬಾರದ ಹಾಡುಗಳು ಅವರ ತುಟಿಗಳ ಮೇಲೆ, ಕಿವಿಗಳ ಮೇಲೆ ನಲಿದಾಡುತ್ತಿರುತ್ತವೆ. ಆದರೆ ಪ್ರೀತಿಯೂ ಕೂಡ ಪ್ರಯತ್ನ ಪೂರ್ವಕವಾಗಿ ಕಲಿಯಬೇಕಾದ ವಿಷಯವೆನ್ನುವುದು ಯಾರಿಗೂ ಹೊಳೆಯುವುದಿಲ್ಲ.

ದಯೆ, ಗೌರವ, ಸ್ನೇಹ, ತ್ಯಾಗ ಮುಂತಾದುವೆಲ್ಲಾ ಪ್ರೇಮ ವೃಕ್ಷ ಸೃಷ್ಟಿಸಿದ ಫಲಗಳೆ. ಪ್ರೇಮ ಎಂಬ ಪರಿಕಲ್ಪನೆಯೇ ಒಂದರ್ಥದಲ್ಲಿ ಜಟಿಲವಾದ ಪರಿಕಲ್ಪನೆ. ಪ್ರೇಮ ವಲಯದ ಅವರನ್ನು ಉಳಿಸಿಕೊಳ್ಳಲು ಬಹಳ ಕಷ್ಟಪಡಬೇಕು. ಅವರ ಸಿಟ್ಟುಗಳನ್ನು, ಬೇಸರಗಳನ್ನು ಸಹಿಸಿಕೊಳ್ಳಬೇಕು.

***Please cite this article as:*** ಶಿವರಾಜು, ಎನ್. (2025). ಕನ್ನಡದ ಅತ್ಯುತ್ತಮ ಪ್ರೇಮ ಕಥೆಗಳು: ಮರು ಚಿಂತನೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 4(3), 42–52

ನಮ್ಮ ಅಭಿರುಚಿಗಳನ್ನು ವ್ಯಕ್ತಿತ್ವವನ್ನು ಪಕ್ಕಕ್ಕಿಟ್ಟು ಅವರಿಗೇನಿಷ್ಟವೋ ಹಾಗೆ ವರ್ತಿಸಬೇಕು.

**ಅಧ್ಯಯನದ ವ್ಯಾಪ್ತಿ**

ಅಧ್ಯಯನದ ವ್ಯಾಪ್ತಿಗೆ 1. ರಾಷ್ಟ್ರಕವಿ ಕುವೆಂಪು ಅವರ ಮೀನಾಕ್ಷಿ ಮನೆಯ ಮೇಷ್ಟರು, 2. ಬೆಸಗರಹಳ್ಳಿ ರಾಮಣ್ಣ ಅವರ ಶೂಲ, 03. ಶ್ರೀ ಕೃಷ್ಣ ಆಲನಹಳ್ಳಿ ಅವರ ಸಂಬಂಧ, 4. ಕುಂ.ವೀ. ಅವರ ಬೇಟೆ, 5. ಭೈರಮಂಗಲ ರಾಮೇಗೌಡ ಅವರ ಎತ್ತಣ ಮಾಮರ, ಎತ್ತಣ ಕೋಗಿಲೆ 6. ಗೀತಾ ನಾಗಭೂಷಣ ಅವರ ಚಿತ್ತಿ ಮತ್ತು ರಿಕ್ಷಾ 7. ನಾ.ಡಿಸೋಜಾ ಅವರ 'ದ್ವೀಪ' ಈ ಕಥೆಗಳು ಬರುತ್ತವೆ.

ಅಧ್ಯಯನದ ವ್ಯಾಪ್ತಿಗೆ ಬರುವ ಕಥೆಗಳ ಪೈಕಿ ರಾಷ್ಟ್ರಕವಿ ಕುವೆಂಪು ಅವರ 'ಮೀನಾಕ್ಷಿ ಮನೆ ಮೇಷ್ಟ್ರು', ಕನ್ನಡದ ಅತ್ಯುತ್ತಮ ಪ್ರೇಮಕಥೆಗಳಲ್ಲೊಂದು. ಏಕೆಂದರೆ ಹದಿಹರೆಯದ ಪ್ರೀತಿಗಳಿಗೆ ಯಶಸ್ಸು ಸಿಗುವುದಿಲ್ಲ, ಒಂದು ವೇಳೆ ಯಶಸ್ಸು ದೊರೆತರೂ ಅದು ಕ್ಷಣಿಕ ಮಾತ್ರ ಎಂಬ ಸಂದೇಶ ಕಥೆಯಲ್ಲಿದೆ. ಮೀನಾಕ್ಷಿ ಮನೆ ಪಾಠ ಮಾಡಲು ಮೇಷ್ಟ್ರು ಆಕೆಗರಿವಿಲ್ಲದಂತೆ ಆಕೆಯನ್ನು ಪ್ರೀತಿಸತೊಡಗುತ್ತಾರೆ. ಮೇಷ್ಟ್ರ ದೈಹಿಕ ಚಹರೆಗಳನ್ನು ಕುವೆಂಪು ಹೀಗೆ ಚಿತ್ರಿಸುತ್ತಾರೆ. "ಮೀನಾಕ್ಷಿಯ ಮನೆ ಮೇಷ್ಟರಿಗೆ ಸುಮಾರು ಇಪ್ಪತ್ತಕ್ಕೆ ಮೀರಿರಬಹುದು ವಯಸ್ಸು. ಆದರೂ ನೋಡುವುದಕ್ಕೆ ಹದಿನೈದು ಹದಿನಾರು ವರ್ಷದವರಾಗಿ ತೋರುತ್ತಿದ್ದರು. ಅದಕ್ಕೆ ಕಾರಣ ಅವರ ಮೈಯಲ್ಲಿದ್ದ ಎಳೆತನವಾಗಿರಲಿಲ್ಲ, ಮನೆಯಲ್ಲಿದ್ದ ಬಡತನವಾಗಿತ್ತು. ಆ ಬಡತನದ ದೆಸೆಯಿಂದಲೇ ಅವರು ನಾಲ್ಕಾರು ಮನೆಗಳಲ್ಲಿ ಹುಡುಗರಿಗೆ ಪಾಠ ಹೇಳಿಕೊಡುತ್ತಾ ದುಡ್ಡು ಸಂಪಾದಿಸಿ ತಾವೂ ಹೈಸ್ಕೂಲಿನಲ್ಲಿ ಓದುತ್ತಿದ್ದರು".[1] ಮೇಷ್ಟ್ರು ಮೀನಾಕ್ಷಿಗೆ ಒಂದನೇ ತರಗತಿಯಿಂದಲೂ ಪಾಠ ಹೇಳಿಕೊಟ್ಟ ಕಾರಣದಿಂದ ಮೀನಾಕ್ಷಿಯ ಜೊತೆಯಲ್ಲಿ ಹೆಚ್ಚಿನ ಸಲಿಗೆ ಇತ್ತು. ಮೀನಾಕ್ಷಿಯ ಕುಟುಂಬದ ಸದಸ್ಯರೆಲ್ಲರೂ ಮೇಷ್ಟ್ರಿಗೆ ಆಪ್ತರಾಗುತ್ತಾರೆ. ಆರಂಭದ ದಿನಗಳಲ್ಲಿ ಮೇಷ್ಟ್ರಿಗೆ ಮೀನಾಕ್ಷಿಯ ಮೇಲೆ ಯಾವ ಭಾವನೆಗಳು ಇರುವುದಿಲ್ಲ. ನಾನು ಗುರು, ಅವಳು ಶಿಷ್ಯೆ ಎಂಬ ಸಾಮಾನ್ಯ ಭಾವನೆಯಷ್ಟೇ ಇರುತ್ತದೆ.

ದಿನಕಳೆದಂತೆ ಮೀನಾಕ್ಷಿಯ ಮೇಲೆ ಪ್ರೀತಿ ಬೆಳೆಯುತ್ತದೆ. ಮೀನಾಕ್ಷಿ ಅಂತಹ ಹೇಳಿಕೊಳ್ಳುವಂತಹ ಸುಂದರಿಯಲ್ಲದಿದ್ದರೂ ಆಕೆಯ ಮೇಲೆ ಅವರಿಗೆ ಅನುರಾಗ ಬೆಳೆಯುತ್ತದೆ. "ಮೀನಾಕ್ಷಿ ಕುರೂಪಿಯಲ್ಲದಿದ್ದರೂ ಅಷ್ಟೇನೂ ಮನಮೋಹಿಸುವ ಚೆಲಯವೆಯಾಗಿರಲಿಲ್ಲ. ಅವಳಲ್ಲಿದ್ದ ವಿಶೇಷತೆ ಎಂದರೆ ತಲೆಗೂದಲು. ಚಿಕ್ಕಂದಿನಲ್ಲಿಯೇ ನೀಳವಾಗಿ ತೋರವಾಗಿ ಕಪ್ಪಗೆ ಬೆಳೆದಿತ್ತು. ಎರಡಲ್ಲ ಮೂರು ಜಡೆಗಳನ್ನು ಬೇಕಾದರೂ ಹಾಕಿಕೊಳ್ಳಬಹುದಿತ್ತು".[2] ಮೇಷ್ಟ್ರು ಮೀನಾಕ್ಷಿ ತಂದೆಯ ಅಂತಸ್ತನ್ನು ನೋಡಿ ಮೀನಾಕ್ಷಿಯ ಬಳಿ ತಮ್ಮ ಪ್ರೇಮ ನಿವೇದನೆಯನ್ನು ಮಾಡಿಕೊಳ್ಳುವುದೇ ಇಲ್ಲ. ಮೇಷ್ಟ್ರು ಪ್ರೇಮ ನಿವೇದನೆಯ ನಿರ್ಧಾರ ಕೈಗೊಳ್ಳುವ ಹೊತ್ತಿಗೆ ಕಾಲ ಮಿಂಚಿ ಹೋಗಿರುತ್ತದೆ. ಪ್ರೀತಿ ಅಂತ ಆದ್ಮೇಲೆ ಅದನ್ನು ಹೇಳಿಬಿಡಬೇಕು. ಒಪ್ಪುವುದು ಬಿಡುವುದು ಅವರಿಗೆ ಸೇರಿದ ವಿಚಾರ. ಮೀನಾಕ್ಷಿಗೆ ಮದುವೆ ನಿಶ್ಚಯವಾದ ವಿಚಾರ ತಿಳಿದು ಮೇಷ್ಟ್ರು ತತ್ತರಿಸಿ ಹೋಗುತ್ತಾರೆ. ಮೀನಾಕ್ಷಿ ಮದುವೆಯನ್ನು ತಡೆಯಲು ಅವರು ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾಗುತ್ತವೆ. ಕೊನೆಗೆ ಮೀನಾಕ್ಷಿಯ ಗಂಡನನ್ನು ಸಾಯಿಸುವ ಹಂತಕ್ಕಿಳಿಯುತ್ತಾರೆ. ಅಂತಿಮವಾಗಿ ಅವಳ ಸುಖ ಸಂಸಾರವನ್ನು ಕಂಡು ಸುಮ್ಮನಾಗುತ್ತಾರೆ.

ಕುವೆಂಪು ಅವರು ಇಲ್ಲಿ ಹೇಳಹೊರಟಿರುವ ಮಹತ್ವದ ವಿಚಾರಗಳೆಂದರೆ ಹದಿಹರೆಯರ ಪ್ರೀತಿಗಳ ವಿಫಲತೆ ಹಾಗೂ ಗುರು ಶಿಷ್ಯರ ನಡುವೆ ಪ್ರೀತಿ ಇರಬಾರದೆಂಬ ವಿಚಾರ. ಏಕೆಂದರೆ ಮೀನಾಕ್ಷಿ ಮತ್ತು ಮೇಷ್ಟ್ರು ಪ್ರೀತಿ ವಿಫಲವಾಗಲು ಅವರ ವಯಸ್ಸು ಕಾರಣವಾಗುತ್ತದೆ. ಮೇಷ್ಟ್ರು ಹಾಗೂ ಮೀನಾಕ್ಷಿ ಹೆಚ್ಚು ಕಡಿಮೆ ಒಂದೇ ವಯಸ್ಸಿನವರಾದ ಕಾರಣದಿಂದ,

ಅವರ ಪ್ರೀತಿ ವಿಫಲವಾಗುತ್ತದೆ. ಮೇಷ್ಟ್ರು ಜೀವನದಲ್ಲಿ ಭದ್ರತೆಯನ್ನು ಕಾಯ್ದುಕೊಳ್ಳದ ಮುನ್ನ ಮೀನಾಕ್ಷಿಯ ತಂದೆಯ ಬಳಿ ಮೀನಾಕ್ಷಿಯನ್ನು ತನಗೆ ಮದುವೆ ಮಾಡಿಕೊಡಿ ಎಂದು ಕೇಳಲು ಹೆದರುತ್ತಾರೆ. ಭಾರತೀಯ ಸಂಸ್ಕೃತಿಯಲ್ಲಿ ಗುರುಶಿಷ್ಯ ಸಂಬಂಧಕ್ಕೆ ಪವಿತ್ರವಾದ, ಗೌರವಯುತವಾದ ಸ್ಥಾನವಿದೆ. ಗುರುಗಳು ಶಿಷ್ಯರನ್ನಾಗಲಿ, ಶಿಷ್ಯರು ಗುರುಗಳನ್ನಾಗಲಿ ಪ್ರೀತಿಸುವುದು, ಅವರೊಂದಿಗೆ ಅನಾವಶ್ಯಕವಾಗಿ ಮಾತನಾಡುವುದು, ಪ್ರಣಯದಲ್ಲಿ ತೊಡಗುವುದು ಅಪವಿತ್ರ, ಅಪ್ರಾಮಾಣಿಕತೆ, ಮೋಸ, ವಂಚನೆ ಎಂದು ಕುವೆಂಪು ಅವರು ಪ್ರಬಲವಾಗಿ ನಂಬಿದ್ದರು. ಗುರು ಶೀಷ್ಯರ ಸಂಬಂಧ ತಾಯಿ–ಮಕ್ಕಳ ಸಂಬಂಧದ ಹಾಗೆ ಎಂದು ಅವರು ಪ್ರಬಲವಾಗಿ ಪ್ರತಿಪಾದಿಸಿದರು. ಗುರು – ಶಿಷ್ಯಂದಿರ ನಡುವೆ ವಯಸ್ಸಿನ ಅಂತರ ಇದ್ದರೂ ಇಬ್ಬರು ಜೀವನದಲ್ಲಿ ಸ್ಥಿರತೆಯನ್ನು ಕಾಯ್ದುಕೊಂಡಿದ್ದರೂ, ಮದುವೆಯಾಗುವುದು ತಪ್ಪು.

ಪ್ರಸ್ತುತ ಅಧ್ಯಯನಕ್ಕೆ ಆಯ್ದುಕೊಂಡ ಕಥೆಗಳ ಪೈಕಿ ಶ್ರೀಕೃಷ್ಣ ಆಲನಹಳ್ಳಿ ಅವರ 'ಸಂಬಂಧ' ಕಥೆ ಮೀನಾಕ್ಷಿ ಮನೆಮೇಷ್ಟ್ರು ಕಥೆಯೊಂದಿಗೆ ಹೋಲಿಕೆಯಾಗುವ ಕಥೆಯಾಗಿದೆ. ಏಕೆಂದರೆ ಆ ಕಥೆಯ ಹಾಗೆ ಈ ಕಥೆಯು ಸಹ ವಿಫಲ ಪ್ರೇಮಕಥೆ ಆ ಕಥೆಯ ಕಥಾನಾಯಕನ ಹಾಗೆ ಈ ಕಥೆಯ ಕಥಾನಾಯಕನೂ ಸಹ ತನ್ನ ಪ್ರೇಯಸಿಯ ಬಳಿ ತನ್ನ ಪ್ರೇಮ ನಿವೇದನೆಯನ್ನು ಮಾಡಿಕೊಳ್ಳುವುದೇ ಇಲ್ಲ. ಕಥೆಯ ಶ್ರೇಷ್ಟತೆಯ ಬಗ್ಗೆ ಕನ್ನಡದ ಖ್ಯಾತ ವಿಮರ್ಶಕರಾದ ಜಿ.ಎಚ್. ನಾಯಕ ಅವರು ಹೇಳಿರುವ ಮಾತುಗಳು ಗಮನಾರ್ಹವಾಗಿದೆ. "ಶ್ರೀಕೃಷ್ಣ ಆಲನಹಳ್ಳಿಯವರ ಕಥೆಗಳಲ್ಲಿ ಜೀವನದ ಬಗೆಗೆ ಉಕ್ಕುವ ಪ್ರೀತಿಯಿದೆ. ಅವರ ತಲೆಮಾರಿನವರು ಜೀನಾನುಭವಗಳಿಗೆ ತಮ್ಮನ್ನು ಮುಕ್ತವಾಗಿ ಒಪ್ಪಿಸಿಕೊಳ್ಳುವುದರ ಬಗೆಗೆ ವಿಶೇಷವಾದ ಸಂಕೋಚ ಬೆಳೆಸಿಕೊಂಡು ಏಕದಂ ಪಕ್ವತೆಯ ಫೋಜು (Pose) ಕೊಡುತ್ತಿರುವ ಈ ದಿನಗಳಲ್ಲಿ, ಅವರ ಜೀವನದ ಪ್ರೀತಿ ಮಹತ್ವದ ಗುಣವಾಗಿ ಕಾಣಿಸುತ್ತದೆ. ಎರಡನೆಯದಾಗಿ, ಹೊಚ್ಚ ಹೊಸತೆಂಬಂಥ ರೀತಿಯ ಜೀವನಾನುಭವ ಅವರ ಕಥೆಗಳ ಮೂಲಕ ಧ್ವನಿಸುವುದಿಲ್ಲವಾದರೂ ಅವರು ಸಣ್ಣ ಕಥೆಗಳ ಮೂಲಕ ಹೇಳಬೇಕಾದುದನ್ನು ಅಚ್ಚುಕಟ್ಟಾದ ಶಿಲ್ಪಕ್ಕೆ ಅಳವಡಿಸುವ ಬಗೆ ಮನಸೆಳೆಯುವಂತಿರುತ್ತದೆ. 'ಸಂಬಂಧ' ಹೆಚ್ಚು ಕಡಿಮೆ ನವೋದಯ ಕಥೆಗಳಂತೆಯೇ ಓದುಗರ ಅಂತಃಕರಣವನ್ನು ಮುಟ್ಟುವಂತ ಕಥೆಯಾಗಿದೆ. ಕಥೆಯ ಘಟನಾವಳಿಗಳ ಯೋಜನೆಯಲ್ಲಿ ಸರಳಸೂತ್ರವೊಂದು ಇದೆ ಅನಿಸುವುದಾದರೂ ಕಥೆಯ ಉದ್ದೇಶವನ್ನು ಸಾಧಿಸುವುದರಲ್ಲಿ ಕಥೆ ಯಶಸ್ವಿಯಾಗಿದೆ".[3] ಪ್ರಸ್ತುತ ಕಥೆಯ ಮುಖ್ಯ ಪಾತ್ರಧಾರಿಗಳಾದ ಲಲಿತಾ ಹಾಗೂ ರಮೇಶ ಬಾಲ್ಯದ ಸ್ನೇಹಿತರು. ಶೂದ್ರನಾದ ರಮೇಶ ಬ್ರಾಹ್ಮಣ ಹುಡುಗಿ ಲಲಿತಾಳನ್ನು ಮನಸಾರೆ ಪ್ರೀತಿಸುತ್ತಾನೆ. ರಮೇಶನು ಉನ್ನತ ಶಿಕ್ಷಣದ ಸಲುವಾಗಿ ನಗರಕ್ಕೆ ಹೋಗುತ್ತಾನೆ. ಎಂಟು ವರ್ಷದ ನಂತರ ಲಲಿತಾಳನ್ನು ಭೇಟಿಯಾದಾಗ ಅವಳ ಬದುಕಿನಲ್ಲಿ ಮಹತ್ತರ ಬದಲಾವಣೆಗಳಾಗಿರುತ್ತವೆ. ಎಂಟು ವರ್ಷಗಳ ನಂತರ ಲಲಿತಾಳನ್ನು ಭೇಟಿಯಾದ ರಮೇಶ ತನ್ನ ಬಾಲ್ಯದ ನೆನಪುಗಳನ್ನು ಹೀಗೆ ನೆನೆಯುತ್ತಾನೆ "ಎಂಟು ವರ್ಷಗಳಲ್ಲಿ ಲಲಿತ–ನಾನು ಬೇರೆ ಬೇರೆಯಾಗಿ ಒಬ್ಬರನ್ನೊಬ್ಬರು ನೋಡಿರದಿದ್ದರೂ ನಾವಿಬ್ಬರೂ ತೀರ ಭಿನ್ನ ಭಿನ್ನವಾದ ಸಂಸ್ಕಾರಗಳಲ್ಲಿ ಹುಟ್ಟಿ ಬೆಳೆದವರಾಗಿದ್ದರೂ ಯಾವುದೋ ತಂತು ನಮ್ಮ ಬಾಲ್ಯದ ಹೃದಯಗಳನ್ನು ಬೆಸೆದದ್ದು, ನಾವು ಒಂದಾಗಿ ಆಡಿ, ಕುಣಿದು ಕುಪ್ಪಳಿಸಿದುದು ನೆನಪಾಗತೊಡಗಿತು".[4] ಎಂಟು ವರ್ಷಗಳ ನಂತರ ರಮೇಶ ಲಲಿತಾಳ ರೋಗಗ್ರಸ್ಥ ಮಗುವಿನ ಆರೈಕೆಯ ವಿಚಾರದಲ್ಲಿ ಆಕೆಯೊಡನೆ ಆಸ್ಪತ್ರೆ ಮನೆಯಲ್ಲೆಲ್ಲಾ ಓಡಾಡುತ್ತಾನೆ. ಪ್ರಸ್ತುತ ಕಥೆಯನ್ನು ಶ್ರೇಷ್ಠ ಕತೆ ಎಂದು ನಿರ್ಧರಿಸಲು ಮುಖ್ಯ ಕಾರಣವೇನೆಂದರೆ 'ಲಲಿತಾ–ರಮೇಶ ಇಬ್ಬರ ಮನಸ್ಸಿನಲ್ಲಿ ಪ್ರೀತಿ ಇದ್ದರೂ ಪರಸ್ಪರ ತಮ್ಮ ಪ್ರೇಮ

ನಿವೇದನೆಯನ್ನು ಹೇಳಿಕೊಳ್ಳುವುದಿಲ್ಲ. ಲಲಿತಾಳಿಗೆ ಮದುವೆಯಾಗಿದೆ ಎಂಬ ವಿಚಾರ ತಿಳಿದ ನಂತರ ರಮೇಶ ಆಕೆಗೆ ಒಬ್ಬ ಒಳ್ಳೆಯ ಸ್ನೇಹಿತನಾಗಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಾನೆ. ಲಲಿತಾಳ ಮಗುವಿನ ಆರೈಕೆಯ ವಿಚಾರ ಆಕೆಯೊಡನೆ ಸಾಕಷ್ಟು ಬಾರಿ ಒಂಟಿಯಾಗಿ ಓಡಾಡುತ್ತಿರುತ್ತಾನೆ. ಆಕೆಯ ಮನೆಗೂ ಸಾಕಷ್ಟು ಬಾರಿ ಭೇಟಿ ನೀಡಿರುತ್ತಾನೆ. ಆದರೂ ಸಹ ರಮೇಶ ಲಲಿತಾಳ ದೈಹಿಕ ಸಾಂಗತ್ಯ ಬಯಸುವುದಿಲ್ಲ. ನಿಜವಾದ ಪ್ರೀತಿಯಲ್ಲಿ ಪ್ರತಿಫಲದ ಅಪೇಕ್ಷೆ ಇರುವುದಿಲ್ಲ. ನವ್ಯ ಸಾಹಿತ್ಯದ ಕೊನೆಯ ಕಾಲಘಟ್ಟದಲ್ಲಿ ರಚನೆಯಾದ ಪ್ರಸ್ತುತ ಕಥೆಯಲ್ಲಿ ಅಸ್ತಿತ್ವವಾದ ಚಿತ್ರಣ ಅದ್ಭುತವಾಗಿ ಮೂಡಿ ಬಂದಿದೆ. ಕಥಾನಾಯಕ ರಮೇಶ ತನ್ನ ಅಸ್ತಿತ್ವದ ಉಳಿವಿಗಾಗಿ ಹೋರಾಡುತ್ತಾನೆ. ಕೃತಿಯ ಶ್ರೇಷ್ಠತೆ ಮತ್ತು ಸ್ವರೂಪದ ಬಗ್ಗೆ ಕನ್ನಡದ ಖ್ಯಾತ ವಿಮರ್ಶಕ ಜಿ.ಎಸ್. ಅಮೂರರು ಹೇಳಿರುವ ಮಾತುಗಳು ಗಮನಾರ್ಹವಾಗಿವೆ. “ಶ್ರೀಕೃಷ್ಣ ಆಲನಹಳ್ಳಿಯವರ ‘ಸಂಬಂಧ’ ನವ್ಯ ಚಳುವಳಿಯ ಒಳಗೆಯೇ ನಡೆದ ಸ್ಥಿತ್ಯಂತರಗಳ ಸೂಚನೆಗಳನ್ನೊಳಗೊಳ್ಳುವುದರಿಂದ ಕನ್ನಡದ ಸಣ್ಣಕಥೆಯ ಸಂದರ್ಭದಲ್ಲಿ ಮಹತ್ವದ್ದಾಗುತ್ತದೆ. ಅದರ ಅಸ್ತಿತ್ವವಾದಿ ನಿರಾಸೆಯ ಧ್ವನಿಯಲ್ಲಿ ನವ್ಯತೆಯನ್ನು ಸ್ಪಷ್ಟವಾಗಿ ಗುರುತಿಸಬಹುದು. ಎಪ್ಪತ್ತರ ದಶಕದ ಕತೆಗಳಲ್ಲಿ ಕಂಡುಬರುವ ಬದ್ಧತೆ, ಸಂಬಂಧ’ದಲ್ಲಿಲ್ಲವಾದರೂ ಜಾತಿ ಪದ್ಧತಿಯಲ್ಲಿ ಹುಟ್ಟಿಕೊಂಡ ವೈಷಮ್ಯಗಳ ಅರಿವು ಈ ಕತೆಯನ್ನು ನವ್ಯ ಸಂದರ್ಭದಿಂದ ಬೇರ್ಪಡಿಸುತ್ತದೆ. ಶೂದ್ರ ಜಾತಿಯ ನಿವೇದಕ ಬ್ರಾಹ್ಮಣ ಜಾತಿಯ ಲಲಿತಾಳೊಡನೆ ಸಂಬಂದ ಹೊಂದಿದ ಸಂದರ್ಭದಲ್ಲಿ ಅರಿವಿನ ಅಭಿವ್ಯಕ್ತಿಯನ್ನು ಗುರುತಿಸಬಹುದು. ಲಲಿತಾಳ ಬಗ್ಗೆ ನಿವೇದಕನಲ್ಲಿ ಎಷ್ಟೇ ಕಳಕಳಿಯಿದ್ದರೂ ಅವರಿಂದ ಪ್ರಯೋಜನವಾಗುವುದಿಲ್ಲ. ಹುಚ್ಚುನಾಯಿ ಕಡಿದು ಸಾಯಲಿದ್ದ ಅವಳ ಮಗುವನ್ನು ಆಸ್ಪತ್ರೆಗೆ ಕಳಿಸಲು ಅವನು ಮಾಡುವ ಸಹಾಯ ಲಲಿತೆಯ ಕಷ್ಟಗಳನ್ನು ಮತ್ತಷ್ಟು ಹೆಚ್ಚಿಸುವುದು ಕತೆಯ ದಾರುಣ ವ್ಯಂಗ್ಯಗಳಲ್ಲೊಂದು” [5]

ಕನ್ನಡದ ದುರಂತ ಪ್ರೇಮಕಥೆಗಳಲ್ಲಿ ‘ಬೇಟೆ’ ಕಥೆಯೂ ಒಂದು. ಆದರೆ ‘ಬೇಟೆ’ ಕಥೆಯಲ್ಲಿ ಕಥಾನಾಯಕ ಚಂದ್ರ ಹಾಗೂ ಗೌರಿ ಒಂದೇ ಊರಿನವರು. ಒಂದೇ ಜಾತಿಯವರು, ಗೌರಿಯ ತಂದೆ ಊರಿನ ಗೌಡ. ಚಂದ್ರನಿಗೆ ದೂರದ ಸಂಬಂಧಿ. ವರಸೆಯಿಂದ ಮಾವ. ತಂದೆ ತಾಯಿಯರನ್ನು ಕಳೆದುಕೊಂಡ ಚಂದ್ರ ಅಜ್ಜಿಯ ಆಶ್ರಯದಲ್ಲಿ ಬೆಳೆಯುತ್ತಾನೆ. ಚಂದ್ರ ಗೌಡರ ಮನೆಯಲ್ಲಿ ಕೆಲಸಕ್ಕಿರುತ್ತಾನೆ. ಒಂದರ್ಥದಲ್ಲಿ ಜೀತಕ್ಕಿರುತ್ತಾನೆ. ಈ ಸಂದರ್ಭದಲ್ಲಿಯೇ ಚಂದ್ರ ಮತ್ತು ಗೌರಿಯರ ನಡುವೆ ಪ್ರೀತಿ ಬೆಳೆಯುತ್ತದೆ. ಚಂದ್ರ ಮತ್ತು ಗೌರಿಯರ ಪ್ರಣಯದ ಸನ್ನಿವೇಶವನ್ನು ಕುಂ.ವೀ. ಹೀಗೆ ಕಟ್ಟಿಕೊಡುತ್ತಾರೆ. “ಕಣ್ಣು ಮುಚ್ಚಿ ತೆರೆಯುವದರೊಳಗಾಗಿ ಮುಳ್ಳನ್ನು ಚಿಮುಟಿಗೆಯಿಂದ ಕಿತ್ತು ಅವಳ ಅಂಗೈಯಲ್ಲಿ ಹಾಕಿದೆ. ಅಂಗೈಗೆ ವರ್ಗವಾದ ಅವನ್ನು ನೋಡುತ್ತಲೇ ಆ ಸುಂದರ ಮುಖದ ಮೇಲಿದ್ದ ನೋವು ಕಂತು, ಕಂತಾಗಿ ಇಳಿದು ಹೋಯಿತು. ಅಂಗಾಲನ್ನು ಸವರುತ್ತಿರುವಾಗ ಮುಖದಲ್ಲಿ ನಗೆ ತುಂಬಿ ಕೊಂಡಿದ್ದನ್ನು ಕಂಡ ಚಂದ್ರ ಕೇಳಿದ. “ಯಾಕೆ ತಡವಾಯಿತು ಬರಾದು” “ಎಲ್ಲಾರ ಕಣ್ತಪ್ಪಿಸಿ ಬರೋದಂದ್ರೆ ಸುಮ್ನೆ ಅಂದ್ಕಂಡಾ” ಅಂದಳು. ಅದು ಖರೇವೆನ್ನಿಸಿತು ಚಂದ್ರಗೆ. ಅವನ ತೊಡೆಯ ಮೇಲೆ ತಲೆ ಇಟ್ಟು ಮಲಗಿದಳು ಗೌರಿ. ಅವಳ ಬೊಗಸೆ ಕಣ್ಣುಗಳ ತುಂಬ ಹುಚ್ಚ ಹಿಡಿಸುವ ಮಾದಕತೆ”.[6] ಚಂದ್ರ – ಗೌರಿಯರ ಪ್ರೀತಿಯ ವಿಚಾರ ತಿಳಿದ ಗೌಡ ಆರಂಭದಲ್ಲಿ ಇವರಿಬ್ಬರ ಮದುವೆಗೆ ಒಪ್ಪಿರುವುದಿಲ್ಲ. ಕಾರಣ ಚಂದ್ರ ಶ್ರೀಮಂತನಲ್ಲ ಎಂಬ ಕಾರಣದಿಂದ. ಸಾವಿರಾರು ಎಕರೆ ಜಮೀನ್ದಾರನಾದ ಗೌಡ ಕಡು ಬಡವ, ಭೂರಹಿತ ಕೃಷಿ, ಕೂಲಿ, ಕಾರ್ಮಿಕನಾದ ಚಂದ್ರನಿಗೆ ತನ್ನ ಮಗಳನ್ನು ಕೊಡಲು ನಿರಾಕರಿಸುತ್ತಾನೆ. ಅಂದರೆ ಚಂದ್ರ ಗೌರಿಯರ ವಿವಾಹಕ್ಕೆ ಅಂತಸ್ತು ಅಡ್ಡಿಯಾಗುತ್ತದೆ. ಊರವರನ್ನು

ಎದುರು ಹಾಕಿಕೊಳ್ಳಲು ಸಿದ್ಧನಿಲ್ಲದ ಗೌಡ ಚಂದ್ರ–ಗೌರಿಯರ ವಿವಾಹಕ್ಕೆ ಮೇಲ್ನೋಟಕ್ಕೆ ಒಪ್ಪಿಕೊಂಡಂತೆ ನಟಿಸಿ, ಕಾಲಹರಣ ಮಾಡುತ್ತಾನೆ. ಎರಡು ವರ್ಷಗಳ ನಂತರ ಮತ್ತೆ ವಿವಾಹದ ಪ್ರಸ್ತಾಪ ಬಂದಾಗ, ಗೌಡರ ಮಗ ಶಿವಣ್ಣ ಚಂದ್ರನನ್ನು ಹೀಗೆ ಬೈಯುತ್ತಾನೆ "ಕ್ವಡಾಕಿಲ್ಲಾಂದ್ರೆ ಏನ್ ಮಾಡ್ತಿಯ. ನಿನ್ನ ಜನ್ಮಕ್ಕೆ ಮೂರ್ಕಾಸಿಗೆ ಬಾಳಂಗಿಲ್ಲ. ನಮ್ತಂಗಿನ ಕ್ವಡ್ಬೇಕ ನಿಂಗೆ"[7] ಶ್ರೀಮಂತ ಯುವಕನಿಗೆ ತನ್ನ ಮಗಳನ್ನು ವಿವಾಹ ಮಾಡಲು ನಿಶ್ಚಯಿಸಿದ ಗೌಡ ಪರಿಸ್ಥಿತಿಯ ಲಾಭ ಪಡೆಯುತ್ತಾನೆ. ಆ ಸಂದರ್ಭದಲ್ಲಿ ಊರಿನಲ್ಲಿ ಚಿರತೆಯ ಕಾಟ ವಿಪರೀತವಾಗಿರುತ್ತದೆ. ನ್ಯಾಯ ಪಂಚಾಯಿತಿಯಲ್ಲಿ ಗೌಡ ಚಂದ್ರನಿಗೆ ಒಂದು ಸವಾಲು ಹಾಕುತ್ತಾನೆ. "ಏನ್ ಚಂದ್ರ ನೀನ್ ಗಂಡ್ಸಾಗಿರೋದು ಖರೇವಿದ್ರೆ ಊರಿಗೆ ಕಾಟ ಕ್ವಡ್ತಿರೋ ಚಿರೇತನ ಕ್ವಂದು ಒತ್ಗಂಡ್ ಬಂದ್ರೆ ಅವತ್ತೇ ಗೌರೀನ ಕ್ವಟ್ ಮದ್ವಿ ಮಾಡ್ತೀನಿ ಇದ್ಕ ಯೇನಂತಿ ನೀನು".[8] ಗೌರಿಗಾಗಿ ಚಿರತೆ ಅಲ್ಲ, ಹುಲಿಯನ್ನಾದರೂ ಕೊಲ್ಲಲು ಸಿದ್ಧನಿದ್ದ ಚಂದ್ರ, ಗೌಡರ ಷರತ್ತಿಗೆ ಒಪ್ಪಿಕೊಳ್ಳುತ್ತಾನೆ. ಚಂದ್ರನ ನಿರ್ಧಾರವನ್ನು ಆತನ ಸ್ನೇಹಿತರು, ಗ್ರಾಮಸ್ಥರು ವಿರೋಧಿಸುತ್ತಾರೆ. ಚಿರತೆಗೆ ಚಂದ್ರ ಬಲಿಯಾಗುವುದು ಅವರಿಗೆ ಇಷ್ಟವಿರಲಿಲ್ಲ. ಅಂದರೆ ಈ ಕಥೆಯಲ್ಲಿ ಜಮೀನ್ದಾರ ಮತ್ತು ಗೌಡರ ನಡುವಿನ ಸಂಘರ್ಷದ ಚಿತ್ರಣವನ್ನು ಕಾಣಬಹುದು. ಚಂದ್ರ, ಚಿರತೆ, ಬೇಟೆಗೆ ಹೋಗುವ ಪೂರ್ವದಲ್ಲಿ ಚಂದ್ರ ಸ್ನೇಹಿತರು ಚಂದ್ರನ ಅನುಪಸ್ಥಿತಿಯಲ್ಲಿ ಆಡುವ ಮಾತುಗಳು ಮಾರ್ಮಿಕವಾಗಿವೆ. "ಗೌರಿಯನ್ನು ಮನೆಯ ಒಂದು ಕೋಣೆಯಲ್ಲಿ ಕೂಡಿ ಬೀಗ ಹಾಕಿರುವನಂತೆ ಗೌಡ, ಗೌಡ, ಮಹಾಪಾಪಿ, ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗಳ ಕರುಳಿಗೆ ಬರೆಯೆಳೆಯುವ ನೀಚ ಪ್ರಾಣಿ, ಚಂದ್ರ ಬಡವಾ ಅನ್ನೋ ಒಂದು ಕಾರಣದಿಂದ ಮಗಳನ್ನು ಕೊಡ್ತಾ ಇಲ್ಲ. ಕರ್ಮಗೇಡಿ ಹಾಗೆ ಅಂದಿದ್ದರೆ ನಾವೆಲ್ಲಾದರೂ ತಲಾ ಒಂದೊಂದೆಕರೆ ಕೊಟ್ಟು ಚಂದ್ರನನ್ನು ಜಮೀನ್ದಾರನನ್ನಾಗಿ ಮಾಡ್ತಿದ್ದೆವಲ್ಲಾ. ಗೌಡ ಗೌರಿಯ ಅಪ್ಪನಲ್ಲ, ಅವನೊಬ್ಬ ರಾಕ್ಷಸ, ರಾಕ್ಷಸ ....... ಇವನು ಗೌಡ ಚಿರತೆ ಹೊಡೆದು ತಾ ಅನ್ನುತ್ತಾನೆ. ನಾಳೆ ಸಮುದ್ರದ ನೀರನ್ನೆಲ್ಲ ನೀನೊಬ್ಬನೆ ಕುಡಿ ಅನ್ನುತ್ತಾನೆ ಅವನು ಹೇಳಿದ್ದಕ್ಕೆಲ್ಲ ಕುಣಿಯಲು ಚಂದ್ರನೇನು ಗೊಂಬೆಯಲ್ಲ"[9] ಅಂದರೆ ಜಮೀನ್ದಾರನೊಬ್ಬನಿಗೆ ಜೀತಗಾರನೊಬ್ಬ ಎದುರು ನಿಲ್ಲಲು ಗ್ರಾಮಸ್ಥರೆಲ್ಲರೂ ಸಹಾಯ ಮಾಡಲು ಮುಂದಾಗುತ್ತಾರೆ.

ಗೌಡನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಚಿರತೆ ಹಿಡಿಯಲು ಕಾಡಿಗೆ ಒಬ್ಬನೇ ಹೋದ ಚಂದ್ರ ಚಿರತೆಯನ್ನು ಬೇಟೆಯಾಡಿಕೊಂಡು ಬರುತ್ತಾನೆ. ಚಿರತೆ ಸಾಯಿಸಲು ಹೋದ ಚಂದ್ರ ಚಿರತೆಗೆ ಬಲಿಯಾಗುತ್ತಾನೆಂಬ ಅಪನಂಬಿಕೆಯಿಂದ ಗೌರಿ ಆತ್ಮಹತ್ಯೆಗೆ ಶರಣಾಗುತ್ತಾಳೆ. ಗೌರಿ ಇಲ್ಲದ ಚಂದ್ರನೂ ಸಹ ಸಾಯುತ್ತಾನೆ. ಪ್ರಸ್ತುತ ಕಥೆಯನ್ನು ಅತ್ಯುತ್ತಮ ಪ್ರೇಮಕಥೆಯೆಂದು ಪರಿಗಣಿಸಲು ಮುಖ್ಯ ಕಾರಣಗಳೆಂದರೆ ಪ್ರೀತಿಗೆ ಅಂತಸ್ತು ಅಡ್ಡಿಬಾರದೆಂಬ ಸಾಮಾಜಿಕ ಸಂದೇಶ ಕಥೆಯಲ್ಲಿದೆ. ಚಂದ್ರ–ಗೌರಿ ಒಂದೇ ಜಾತಿಯವರಾದರೂ, ಒಂದೇ ಕುಟುಂಬದವರಾದರೂ ಅವರ ಪ್ರೀತಿ ದುರಂತ ಅಂತ್ಯವಾಗುತ್ತದೆ. ಗೌರಿಯ ತಂದೆಯ ಉದ್ಧಟತನದಿಂದ ಗೌರಿ–ಚಂದ್ರ ಸಾವನ್ನಪ್ಪುತ್ತಾರೆ. ಚಂದ್ರ ಗೌಡರ ಮನೆಯಲ್ಲಿ ದುಡಿಯುತ್ತಿದ್ದರು ದಿನದ ಹೆಚ್ಚಿನ ಸಮಯ ಅವರ ಮನೆಯಲ್ಲಿಯೇ ಕಳೆದರೂ ಗೌರಿಯ ದೈಹಿಕ ಸಾಂಗತ್ಯ ಬಯಸುವುದಿಲ್ಲ. ನಿಜ ಪ್ರೀತಿ ಎಂತಹ ಸಾಹಸವನ್ನಾದರೂ ಮಾಡಿಸುತ್ತದೆ ಎಂಬುದಕ್ಕೆ ಪ್ರಸ್ತುತ ಕಥೆಯ ಚಂದ್ರನೇ ಅತ್ಯುತ್ತಮ ಉದಾಹರಣೆ. ಚಂದ್ರ ಗೌರಿಯನ್ನು ಪಡೆಯುವ ಸಲುವಾಗಿ ಚಿರತೆಯನ್ನು ಸಾಯಿಸಲು ಮುಂದಾಗುತ್ತಾನೆ. ಆ ಹಾದಿಯಲ್ಲಿ ಭಾಗಶಃ ಯಶಸ್ವಿಯಾಗುತ್ತಾನೆ. ಕುಂ.ವೀ.ಯವರ ಮಧ್ಯ ಕರ್ನಾಟಕದ ಬಳ್ಳಾರಿ, ಹೊಸಪೇಟೆ ಭಾಗದ ಪ್ರಾದೇಶಿಕ ಭಾಷೆಯನ್ನು ಬಳಸಿ ಕಥೆಯನ್ನು ಹೆಣೆದಿದ್ದಾರೆ.

ಪ್ರಸ್ತುತ ಕಥೆಯನ್ನು 1986 ರಲ್ಲಿ ಅಂದಿನ ಕನ್ನಡದ ಖ್ಯಾತ ಚಲನಚಿತ್ರ ನಿರ್ದೇಶಕ ಎಂ. ಎಸ್. ರಾಜಶೇಖರ್ ಅವರು 'ಮನ ಮೆಚ್ಚಿದ ಹುಡುಗಿ' ಎಂಬ ಹೆಸರಿನಲ್ಲಿ ಸಿನಿಮಾ ನಿರ್ಮಿಸುತ್ತಾರೆ. ಮುಖ್ಯ ತಾರಾಗಣದಲ್ಲಿ ಶಿವರಾಜ್ ಕುಮಾರ್, ಸುಧಾರಾಣಿ, ಸುಂದರ್ ಕೃಷ್ಣ ಅರಸ್ ಮುಂತಾದವರು ಅಭಿನಯಿಸಿದ್ದಾರೆ. ಸಿನಿಮಾಗೆ ಚಿತ್ರಕಥೆ ಬರೆಯುವಲ್ಲಿ ಚಿ. ಉದಯಶಂಕರ್ ಅವರು ಸಾಕಷ್ಟು ಶ್ರಮವಹಿಸಿದ್ದಾರೆ. ಕಥೆಯ ಮೂಲ ಆಶಯಕ್ಕೆ ಧಕ್ಕೆ ಆಗದ ರೀತಿಯಲ್ಲಿ ಚಿತ್ರಕಥೆಯನ್ನು ಹೆಣೆದಿದ್ದಾರೆ. ಸಿನಿಮಾದ ಅಂತಿಮ ಭಾಗದ ಕಥೆಯಲ್ಲಿ ಕಥಾನಾಯಕ ಹಾಗೂ ಕಥಾನಾಯಕಿಯರಿಬ್ಬರು ಬದುಕುಳಿಯುತ್ತಾರೆ. ಪ್ರೇಮಕಥಾ ಸಿನಿಮಾಗಳು ಸತತವಾಗಿ ಯಶಸ್ವಿಯಾಗುತ್ತಿದ್ದ ಕಾಲದಲ್ಲಿ ಸಿನಿಮಾದ ಅಂತಿಮ ಭಾಗವನ್ನು ನಿರ್ದೇಶಕರು ಬದಲಾಯಿಸಿದ್ದಾರೆ. 'ಬೇಟೆ' ಕಥಾರಚನೆಗೆ ಕುಂ.ವೀಯವರಿಗೆ ಸತ್ಯ ಘಟನೆಯೊಂದು ಪ್ರೇರಣೆಯಾಗಿರಬಹುದಾದ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಏಕೆಂದರೆ ಜೀತಗಾರನೊಬ್ಬ ಜಮೀನ್ದಾರನಿಗೆ ಎದುರು ನಿಲ್ಲುವ ಸನ್ನಿವೇಶವನ್ನು ಕಥೆಯಲ್ಲಿ ಕಾಣಬಹುದು. 'ಭೂ ಸುಧಾರಣಾ ಕಾಯಿದೆ' ಜಾರಿಗೆ ಬರುವ ಪೂರ್ವದಲ್ಲಿ ಜೀತಗಾರರು ಜಮೀನ್ದಾರರಿಗೆ ಎದುರಿಗೆ ನಿಲ್ಲುವ ಸನ್ನಿವೇಶಗಳು ಸಾಮಾನ್ಯವಾಗಿದ್ದವು. ಜೀತಗಾರರು ಜಮೀನ್ದಾರರ ಮಕ್ಕಳನ್ನು ಪ್ರೀತಿಸುವುದು ಸಾಮಾನ್ಯವಾಗಿತ್ತು.

'ಬೇಟೆ' ಗ್ರಾಮೀಣ ಭಾಗದ ಪ್ರೇಮಕಥೆಯಾದರೆ ಬೈರಮಂಗಲ ರಾಮೇಗೌಡ ಅವರ 'ಎತ್ತಣ ಮಾಮರ ಎತ್ತಣ ಕೋಗಿಲೆ' ನಗರದ ಪ್ರೇಮಕಥೆ ಅರ್ಥಾತ್ ಕಾರ್ಪೋರೇಟ್ ವಲಯದ ಪ್ರೇಮಕಥೆ. ಹೊಸ ತಲೆಮಾರಿನ ಕಥೆಗಾರರಾದ ಬೈರಮಂಗಲ ರಾಮೇಗೌಡರು ಪ್ರಸ್ತುತ ಸಂದರ್ಭದ ಯುವಕರ ಮಾನಸಿಕ ತಲ್ಲಣಗಳನ್ನು ಈ ಕಥೆಯಲ್ಲಿ ಚಿತ್ರಿಸಿದ್ದಾರೆ. ಪ್ರಸ್ತುತ ಕಥೆಯ ಮುಖ್ಯ ಪಾತ್ರಧಾರಿ ಕಥಾನಾಯಕ ವಿಕಾಸನ ತಂದೆ ದಿವಾಕರ ಭಗ್ನ ಪ್ರೇಮಿ. ತಾನು ಪ್ರೀತಿಸಿದವಳು ಸಿಗದಿದ್ದಾಗ ಅನಾಥೆಯೋರ್ವಳನ್ನು ಮದುವೆಯಾಗಿ ಅವಳನ್ನು ಕಳೆದುಕೊಂಡು ಮಗನನ್ನು ತಂದೆ–ತಾಯಿಯಾಗಿ ಸಾಕಿದ ಓರ್ವ ಕನ್ನಡದ ಉಪಾಧ್ಯಾಯ. ದಿವಾಕರ ತನ್ನ ಮಗ ವಿಕಾಸನನ್ನು ವಿವಾಹವಾಗೆಂದು ಒತ್ತಾಯಿಸಿದಾಗ ವಿಕಾಸ ತನ್ನ ಸಹೋದ್ಯೋಗಿಯಾದ ವೃತ್ತಿಯಲ್ಲಿ ಇಂಜಿನಿಯರ್ ಆದ ಚಂದನಾ ಎಂಬ ಹುಡುಗಿಯನ್ನು ಪ್ರೀತಿಸುತ್ತಿರುವುದಾಗಿ ಹೇಳುತ್ತಾನೆ. ವಿಕಾಸ ತನ್ನ ತಂದೆ ದಿವಾಕರನಿಗೆ ಚಂದನಾಳನ್ನು ಪರಿಚಯಿಸುವ ಸಂದರ್ಭದಲ್ಲಿ ಒಂದು ಸಮಸ್ಯೆ ಎದುರಾಗುತ್ತದೆ. ಅದೇನೆಂದರೆ ಚಂದನಾ ಬೇರೆ ಯಾರೂ ಆಗಿರದೆ ಮೂವತ್ತು ವರ್ಷಗಳ ಹಿಂದೆ ತಾನು ಪ್ರೀತಿಸುತ್ತಿದ್ದ ವಂದನಳ ಮಗಳೇ ಆಗಿರುತ್ತಾಳೆ. ಆ ಸಂದರ್ಭದಲ್ಲಿ ದಿವಾಕರ ತನ್ನ ಹಳೆಯ ನೆನಪುಗಳನ್ನು ಹೀಗೆ ನೆನೆಯುತ್ತಾನೆ "ಮೂವತ್ತು ವರ್ಷಗಳ ಹಿಂದೆ ನಾನು ಎಂ.ಎ. ಓದುತ್ತಿದ್ದಾಗ ಚಿಗುರಿ ಹೆಮ್ಮರವಾದ ಉತ್ಕಟ ಪ್ರೇಮಸಂಬಂಧವೊಂದರ ಕಹಿನೆನಪು ದಿವಾಕರನನ್ನು ಆಗಾಗ ಬಾಧಿಸುತ್ತಲೇ ಇದ್ದದ್ದು. ಈಗ ಚಂದನಾಳನ್ನು ನೋಡಿ ಸ್ಮರಣೆಗೆ ಬಂತು. ಪರೀಕ್ಷೆ ಫಲಿತಾಂಶ ಬರುವವರೆಗೆ ಹಳ್ಳಿಗೆ ಹೋಗಿ ತಂದೆ–ತಾಯಿಯರ ಜೊತೆ ಇದ್ದು ಬರುವುದಾಗಿ ಹೋಗಿ ದಿವಾಕರನಿಗೆ ಮರಳಿ ಮಂಗಳೂರಿಗೆ ಬರುವಷ್ಟರಲ್ಲಿ ಅವನನ್ನು ಸುಲಭಕ್ಕೆ ಚೇತರಿಸಿಕೊಳ್ಳಲಾಗದ ಆಘಾತಕ್ಕೆ ದೂಡಿ ಕನಸಿನ ಹಕ್ಕಿ ಹಾರಿಹೋಗಿತ್ತು. ಅವನಿಗಾಗಿ ರೂಮ್‌ನಲ್ಲಿ ಕಾಯುತ್ತಿತ್ತು ಒಂದು ಪತ್ರ. ಇದರಲ್ಲಿ ವಂದಳಾನ ತಪ್ಪೇನು ಇಲ್ಲ. ಅವಳು ಪ್ರಣಯ ದ್ರೋಹಿಯೂ ಅಲ್ಲ. ಅಸಹಾಯಕ ಸನ್ನಿವೇಶದಲ್ಲಿ ಪರಿಸ್ಥಿತಿಯ ಕೈಗೊಂಬೆಯಾಗಿದ್ದಾಳೆ. ರಾಜಕಾರಣಿಯಾದ ಅಪ್ಪ ಬೆಂಗಳೂರಿನ ಒಳ್ಳೆಯ ಸಂಬಂಧವನ್ನು ತಂದು ಮಗಳ ಮದುವೆ ಮಾಡಿ ಮುಗಿಸಿದ್ದಾರೆ".[10] ದಿವಾಕರನ ಪ್ರೀತಿ ಮುರಿದು ಬೀಳಲು ಅಂತಸ್ತು ಕಾರಣವಾಗಿರುತ್ತದೆ. ಏಕೆಂದರೆ

ಎಂ.ಎ. ವ್ಯಾಸಂಗ ಮಾಡುತ್ತಿದ್ದ ದಿವಾಕರನಿಗೆ ಇನ್ನು ನೌಕರಿ ದೊರೆತಿರುವುದಿಲ್ಲ.

ಕೆಳಮಧ್ಯಮ ವರ್ಗದ ಯುವಕರಿಗೆ ಪ್ರೀತಿ, ಉದ್ಯೋಗ ಒಂದೇ ನಾಣ್ಯದ ಎರಡು ಮುಖಗಳಿದ್ದ ಹಾಗೆ. ದಿವಾಕರನಿಗೆ ನೌಕರಿ ದೊರೆತಿದ್ದರೆ ಆತ ವಂದನಾಳನ್ನು ವಿವಾಹವಾಗಬಹುದಿತ್ತು. ಮೂವತ್ತು ವರ್ಷಗಳ ನಂತರ ತನ್ನ ಮಾಜಿ ಪ್ರೇಯಸಿಯ ಮಗಳನ್ನು ತನ್ನ ಮಗ ಪ್ರೀತಿಸುತ್ತಿದ್ದಾನೆ ಎಂಬ ವಿಚಾರ ತಿಳಿದು ದಿವಾಕರ ಹಳೆಯ ದ್ವೇಷವನ್ನೆಲ್ಲಾ ಮರೆತು ಮಗನ ಮದುವೆಗೆ ಮುಂದಾಗುತ್ತಾನೆ. ಪ್ರಸ್ತುತ ಕಥೆಯನ್ನು ಶ್ರೇಷ್ಠ ಪ್ರೇಮಕಥೆಯೆಂದು ಪರಿಗಣಿಸಲು ಮುಖ್ಯ ಕಾರಣಗಳೆಂದರೆ ಚಂದನಾ ತನ್ನ ಮಾಜಿ ಪ್ರೇಯಸಿ ವಂದನಾಳ ಮಗಳೆಂದು ತಿಳಿದಿದ್ದರೂ ತನ್ನ ಮಗ ವಿಕಾಸನಿಗೆ ಚಂದನಾಳೊಂದಿಗೆ ವಿವಾಹ ಮಾಡಲು ಮುಂದಾಗುತ್ತಾನೆ. ಕಥೆಯಲ್ಲಿ ವಿಕಾಸ್ ಒಬ್ಬ ಉತ್ತಮ ವ್ಯಕ್ತಿಯಾಗಿ ಚಿತ್ರಿತನಾಗಿದ್ದಾನೆ. ಏಕೆಂದರೆ ಚಂದನಾಳನ್ನು ಆತ ಯಾವ ರೀತಿಯಲ್ಲಾದರೂ ಬಳಸಿಕೊಳ್ಳಬಹುದಿತ್ತು. ಆದರೆ ಆ ತರಹದ ಯಾವುದೇ ಸಾಹಸಕ್ಕೆ ಆತ ಕೈ ಹಾಕುವುದಿಲ್ಲ.

ನವ್ಯೋತ್ತರ ಬರಹಗಾರರಲ್ಲಿ ಅಗ್ರಗಣ್ಯರಾದ ಡಾ. ಬೆಸಗರಹಳ್ಳಿ ರಾಮಣ್ಣ ಅವರು ಪ್ರೇಮ ಸಂಬಂಧಿ ಕಥೆಗಳನ್ನು ಬರೆಯುವುದರಲ್ಲಿ ಸಿದ್ಧಹಸ್ತರು. ಅವರು ರಚಿಸಿದ 47 ಕಥೆಗಳ ಪೈಕಿ ಮುಖ್ಯವಾಗಿ ಮೂರು ಪ್ರೇಮ ಸಂಬಂಧಿ ಕಥೆಗಳನ್ನು ಬರೆದಿದ್ದಾರೆ. ಅವುಗಳೆಂದರೆ 'ಗರ್ಜನೆ', 'ಶೂಲ', 'ಬೇಲ', ಮೂರು ಕಥೆಗಳು ಸಹ ಅತ್ಯುತ್ತಮ, ಪ್ರೇಮಕಥೆಗಳೇ. ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಶೂಲ ಕಥೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಕಥೆಯ ಬಗ್ಗೆ ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ. "ಶೂಲ–ಕತೆ ಮಂಡ್ಯ ಜಿಲ್ಲೆಯ ಅರಕೆರೆ ಗ್ರಾಮದಲ್ಲಿ ನಡೆಯುವ ವಿಶಿಷ್ಟ ಹಬ್ಬವೊಂದರ ಹಿನ್ನೆಲೆಯಲ್ಲಿ ರಚಿತವಾದ ದುರಂತ ಪ್ರೇಮಕಥೆ. ಅಪರೂಪಕ್ಕೊಮ್ಮೆ ನಡೆಯುವ ಈ ಹಬ್ಬವನ್ನು ಡಾ. ಎಂ. ಚಿದಾನಂದ ಮೂರ್ತಿ ಹಾಗೂ ನನ್ನ ಅನೇಕ ಸ್ನೇಹಿತರೊಡನೆ ನೋಡುವ ಅದೃಷ್ಟ ನನಗೆ 1976ರಲ್ಲಿ ಲಭಿಸಿತು".[11] ಈ ಕಥೆಯ ಪ್ರೇಮಿಗಳಾದ ಗೌರಿ ಮತ್ತು ಜಯರಾಮು ಒಂದೇ ಊರಿನವರು. ಒಂದೇ ಜಾತಿಯವರು. ಇವರ ಪ್ರೀತಿ ಮುರಿದು ಬೀಳಲು ಜಾತಿ, ಕಾರಣವಾಗದೇ ಅಂತಸ್ತು, ಕುಲ ಕಾರಣವಾಗಿರುತ್ತದೆ. ಬಿ.ಎಸ್ಸಿ. ಪದವೀಧರನಾದ ಜಯರಾಮು ಊರಿಗೆ ಪ್ರಗತಿಪರ ರೈತನಾಗಿರುತ್ತಾನೆ. ಗೌರಿಯ ಅಣ್ಣ ಪುಟ್ಟಸ್ವಾಮಿ. ಜಯರಾಮುವಿಗೆ ಸರ್ಕಾರಿ ನೌಕರಿ ದೊರೆತಿಲ್ಲ ಎಂಬ ಕಾರಣದಿಂದ ವಿವಾಹಕ್ಕೆ ಒಪ್ಪುವುದಿಲ್ಲ. ಗೌರಿಯ ವಿವಾಹವನ್ನು ಅದೇ ಗ್ರಾಮದ ನಾಡಗೌಡರ ಮಗನಾದ ಶಂಕರನೊಂದಿಗೆ ನಿಶ್ಚಯ ಮಾಡುತ್ತಾನೆ. ಜಯರಾಮು – ಗೌರಿಯರ ವಿವಾಹದ ವಿಚಾರ ಊರಿನಲ್ಲಿ ದೊಡ್ಡ ಗಲಾಟೆಯಾಗಿ ಶೂಲ ಆಟದಲ್ಲಿ ಜಯರಾಮು ಗೆದ್ದರೆ ಗೌರಿಯ ಜೊತೆ ವಿವಾಹ ಮಾಡಿಸುವುದಾಗಿ ಊರಿನ ಯಜಮಾನರು ತೀರ್ಮಾನಿಸುತ್ತಾರೆ. ಊರಿನ ಯಜಮಾನರ ತೀರ್ಮಾನಕ್ಕೆ ಪುಟ್ಟಸ್ವಾಮಿಯು ಒಪ್ಪಿರುತ್ತಾನೆ. ವಿಶೇಷವೆಂದರೆ ಶೂಲ ಆಟದಲ್ಲಿ ಜಯರಾಮುವಿಗೆ – ಪುಟ್ಟಸ್ವಾಮಿಯೇ ಪ್ರತಿಸ್ಪರ್ಧಿ. ಆಟದಲ್ಲಿ ಮರದಿಂದ ಬಿದ್ದು ಸಾಯುತಿದ್ದ, ಪುಟ್ಟಸ್ವಾಮಿಯನ್ನು ಜಯರಾಮು ಕಾಪಾಡುತ್ತಾನೆ. ಅಂತಿಮವಾಗಿ ಜಯರಾಮು ಸಾಯುತ್ತಾನೆ. ಜಯರಾಮನನ್ನು ಮರೆಯಲಾಗದ ಗೌರಿಯು ಪ್ರಾಣತ್ಯಾಗ ಮಾಡುತ್ತಾಳೆ. ಕಥೆಯ ಅಂತಿಮ ಭಾಗ ಹೃದಯವಿದ್ರಾವಕವಾಗಿದೆ. "ಈ ಅನಿರೀಕ್ಷಿತ ದುರಂತವನ್ನು ನೋಡುತ್ತಿದ್ದವರನ್ನು ನೂಕಿದ ಪುಟ್ಟಸ್ವಾಮಿ ಕ್ರೋಧದಿಂದ "ನಮ್ಮ ಮನೆತನದ ಮರ್ಯಾದೆಯು ಎಲ್ಲರೆದುರು ಮಣ್ಣುಪಾಲು ಮಾಡಿದೆ" ಎಂದು ಗೌರಿಯ ಮಂಡಿಯನ್ನು ಹಿಡಿದು ಬಲ ಬಿಟ್ಟು ಎಳೆದ. ಜಯರಾಮುವಿನ ರಕ್ತಸ್ನಿಗ್ಧ ದೇಹವನ್ನು ಬಿಡದಂತೆ ಅಪ್ಪಿಕೊಂಡಿದ್ದ ಗೌರಿಯ ದೇಹ ಹಾಗೆಯೇ ನಿಮಿರಿ ನಿಂತಿತ್ತು"[12] ಈ ಕಥೆಯಲ್ಲಿ ಜಯರಾಮು – ಗೌರಿಯರ ಮದುವೆ ಮುರಿದು ಬೀಳಲು ಅಂತಸ್ತು

ಕಾರಣವಾಗುತ್ತದೆ. ಏಕೆಂದರೆ ಜಯರಾಮುವಿನ ಕುಟುಂಬದವರು ಗೌರಿಯ ಕುಟುಂಬದವರಷ್ಟು ಶ್ರೀಮಂತರಾಗಿರುವುದಿಲ್ಲ. ಜಯರಾಮುವಿಗೆ ನೌಕರಿ ದೊರೆತಿದ್ದರೆ ಆತನ ಪ್ರೀತಿ ಯಶಸ್ವಿಯಾಗುತ್ತಿತ್ತು. ನೌಕರಿಯ ಕಾರಣದಿಂದ ಜಯರಾಮುವಿಗೆ ಹಿನ್ನಡೆಯಾಗುತ್ತದೆ. ಅಂದರೆ ಉದ್ಯೋಗ, ಹಣ, ಅಂತಸ್ತು ಇಲ್ಲದೆ ಪ್ರೀತಿಯನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವ ಗಟ್ಟಿ ಸಂದೇಶ ಕಥೆಯಲ್ಲಿದೆ.

ಡಾ. ಗೀತಾ ನಾಗಭೂಷಣ ಅವರ 'ಚಿತ್ತಿ ಮತ್ತು ರಿಕ್ಷಾ' ವಿಭಿನ್ನ ಪ್ರೇಮ ಕಥೆ. ಗೀತಾ ನಾಗಭೂಷಣರವರ ಉತ್ತರ ಕರ್ನಾಟಕದ ಗುಲ್ಬರ್ಗಾ ಕನ್ನಡದಲ್ಲಿ ಈ ಕಥೆಯನ್ನು ಹೆಣೆದಿದ್ದಾರೆ. ಪ್ರಸ್ತುತ ಕಥೆಯ ಕಥಾ ನಾಯಕಿ ಚಿತ್ತಿ ತಂದೆ, ತಾಯಿಗಳಿಂದ ದೂರವಾಗಿ ಸಾಕು ತಂದೆಯ ಆಶ್ರಯದಲ್ಲಿ ಬೆಳೆದವಳು. ಸಾಕು ತಂದೆಯ ಪಕ್ಕದ ಮನೆಯ ರಿಕ್ಷಾ ಯುವಕನಾದ ಸೋಮುವಿನೊಂದಿಗೆ ಪ್ರೀತಿಯಾಗುತ್ತದೆ. ಚಿತ್ತಿ ತಂದೆಯ ಆಣತಿಯಂತೆ ನಡೆದವಳು. ಚಿತ್ತಿಯ ವ್ಯಕ್ತಿತ್ವವನ್ನು ನಿರೂಪಕರು ಹೀಗೆ ಚಿತ್ರಿಸಿದ್ದಾರೆ. "ಚಿತ್ತಿಯ ವ್ಯಕ್ತಿತ್ವ ಸಾಣೆ ಹಿಡಿದಿಟ್ಟ ಚಾಕುವಿನಂತೆ ಹರಿತ, ಸ್ವಾಭಿಮಾನಿ, ಗಿರಾಕಿಗಳೊಂದಿಗೆ ಸರಸ, ನಗು, ತುಸು ಹೆಚ್ಚೆನ್ನಿಸುವ ಮಾತುಗಾರಿಕೆ, ಹರಟೆ ದೂರ ನಿಂತು ಅವಳ ಸೊಕ್ಕಿನ ಹರಯಕ್ಕೆ ಬಿಸಿಯಾಗುವ ಗಂಡುಗಳಿಗೆ ಹತ್ತಿರ ಬಂದು ಅವಳನ್ನು ಕೆಣಕುವ ತಾಕತ್ತಿಲ್ಲ, ಕೆಣಕಿದರೆ ಚಿತ್ತಿ ಚಂಡಿ"[13] ಚಿತ್ತಿ ಮತ್ತು ಸೋಮುವಿನ ಪ್ರೀತಿಗೆ ಅಂತಸ್ತು, ಜಾತಿ ಅಡ್ಡಿಯಾಗಿಲ್ಲ. ರಿಕ್ಷಾ ಓಡಿಸುವ ಅವರಿಬ್ಬರೂ ಅಂತಸ್ತು, ಜಾತಿ ನೋಡಿ ಪ್ರೀತಿಸಿದವರಲ್ಲ. ಚಿತ್ತಿ ಮತ್ತು ಸೋಮುವಿನ ಮದುವೆಗೆ ಇಬ್ಬರ ಮನೆಯವರು ಸಮ್ಮತಿ ಸೂಚಿಸುತ್ತಾರೆ. ಆದರೆ ವಿಧಿ ಅವರ ಬದುಕಿನಲ್ಲಿ ಬೇರೆ ರೀತಿಯ ಆಟವನ್ನೇ ಆಡುತ್ತದೆ. ರಸ್ತೆ ಅಪಘಾತದಲ್ಲಿ ಸೋಮು ಮರಣ ಹೊಂದುತ್ತಾನೆ. ಸೋಮುವಿನ ಮರಣದಿಂದ ಚಿತ್ತಿ ಅಕ್ಷರಶಃ ಹುಚ್ಚಿಯಂತಾಗುತ್ತಾಳೆ. ಸೋಮುವಿನ ಮರಣದ ಸುದ್ದಿಯನ್ನು ಆತನ ಸ್ನೇಹಿತನಾದ ಬಾಬುಮಿಯಾ ದುಃಖದಿಂದ ಹೀಗೆ ಹೇಳುತ್ತಾನೆ. "ನಿನ್ನಿ ರಾತರಿ ರಿಕ್ಷಾಕ್ಕೆ ಲಾರಿ ಟಕ್ಕರ್ ಆಗಿ ಅಂವಾ ಅಲ್ಲೇ ಸತ್ತು ಬಿದ್ದಾನವ್ವೋ ." ಎಂದಳುತ್ತ ಬಾಬುಮಿಯಾ ಕುಸಿದು ಕುಳಿತ ಚಿತ್ತಿ ಕಲ್ಲಿನಂತೆ ನಿಂತುಬಿಟ್ಟಳು"[14] ಸೋಮುವಿನ ಮರಣದ ಮೂರುದಿನಗಳ ನಂತರ ಚಿತ್ತಿ ಜೋಪಡಿ ಬಿಟ್ಟು ಹೊರಬರುತ್ತಾಳೆ. ಅಲ್ಲಿಗೆ ಕತೆ ಮುಕ್ತಾಯವಾಗುತ್ತದೆ. ಪ್ರಸ್ತುತ ಕಥೆಯನ್ನು ಶ್ರೇಷ್ಠ ಪ್ರೇಮ ಕಥೆ ಎಂದು ಪರಿಗಣಿಸಲು ಮುಖ್ಯವಾದ ಕಾರಣಗಳೆಂದರೆ ಚಿತ್ತಿ ಮತ್ತು ಸೋಮು ವಿವಾಹ ಪೂರ್ವ ಲೈಂಗಿಕತೆಗೆ ಆಸೆ ಪಟ್ಟವರಲ್ಲ. ಹಾಗೂ ಅವರು ಜಾತಿ ಅಂತಸ್ಥಿನ ಬಗ್ಗೆ ತಲೆ ಕೆಡಿಸಿಕೊಂಡವರಲ್ಲ. ಪ್ರಸ್ತುತ ಕಥೆಯನ್ನು ಕನ್ನಡದ ಅತ್ಯುತ್ತಮ ಪ್ರೇಮ ಕಥೆಗಳಲ್ಲೊಂದು ಎಂದು ಪರಿಗಣಿಸಬಹುದು. ಸೋಮುವಿನ ಮರಣದ ಮೂರು ದಿನಗಳ ನಂತರ ಚಿತ್ತಿ ಮತ್ತೆ ರಿಕ್ಷಾ ಓಡಿಸಲು ಪ್ರಾರಂಭಿಸುತ್ತಾಳೆ. ಅಂದರೆ ಪ್ರೀತಿಗಿಂತ ಬದುಕು ಮುಖ್ಯ ಎಂಬ ಸಾಮಾಜಿಕ ಸಂದೇಶ ಕಥೆಯಲ್ಲಿದೆ. ಪ್ರಸ್ತುತ ಕಥಾ ರಚನೆಗೆ ಗೀತಾ ನಾಗಭೂಷಣರವರಿಗೆ ಸತ್ಯ ಘಟನೆಯೊಂದು ಪ್ರೇರಣೆಯಾಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ನವ್ಯ ವಿಮರ್ಶಕ ಎರಿಕ್ ಫ್ರಾಂ ನ ಅನುವಾದಿತ ಕೃತಿ 'ಪ್ರೀತಿಸುವುದೆಂದರೆ' ಕೃತಿಯನ್ನು ಓದಿದ ನಂತರ ಪ್ರಸ್ತುತ ಲೇಖನವನ್ನು ಬರೆಯುವ ಆಲೋಚನೆ ಹುಟ್ಟಿತು. ಪ್ರೀತಿಯನ್ನು ಕುರಿತು ಎರಿಕ್ ಫ್ರಾಂ ಹೇಳಿರುವ ಮಹತ್ವದ ಹೇಳಿಕೆ ಇಂತಿದೆ. "ಪ್ರೀತಿಯು ಮೂಲಭೂತವಾಗಿ ಒಂದು ನಿರ್ದಿಷ್ಟ ವ್ಯಕ್ತಿಯ ಜತೆಗಿನ ಸಂಬಂಧವಲ್ಲ. ಅದೊಂದು ಬಗೆಯ ದೃಷ್ಟಿಕೋನ. ವ್ಯಕ್ತಿತ್ವವನ್ನು ಒಂದು ನಿರ್ದಿಷ್ಟ ಅಚ್ಚಿನಲ್ಲಿ ರೂಪಿಸಿಕೊಳ್ಳುವುದು. ಪ್ರೀತಿಸುವುದೆಂದರೆ ನಮ್ಮನ್ನು ನಾವು ಭವಿಷ್ಯತ್ತಿನ ಬಗ್ಗೆ ಯಾವುದೇ ಗ್ಯಾರಂಟಿಯೂ ಇಲ್ಲದೆ ಬದ್ಧರಾಗಿಸಿಕೊಳ್ಳುವುದು. ನಮ್ಮ ಪ್ರೀತಿಯು, ನಮ್ಮ ಪ್ರೀತಿ ಪಾತ್ರರಲ್ಲಿಯೂ ಪ್ರೀತಿಯನ್ನು

ಹುಟ್ಟಿಸುವುದೆಂಬ ಏಕೈಕ ನಂಬಿಕೆಯೊಂದಿಗೆ ಸರ್ವಸಮರ್ಪಣೆ ಮಾಡುವ ಕ್ರಿಯೆ ಅದು. ಪ್ರೀತಿಯು ನಂಬಿಕೆಯಿಂದ ತುಂಬಿದ ಕ್ರಿಯೆ"[15] ಒಟ್ಟಾರೆಯಾಗಿ ಹೇಳುವುದಾದರೆ ನಿಜವಾದ ಪ್ರೀತಿಯಿಂದ ಮನುಷ್ಯನ ವ್ಯಕ್ತಿತ್ವ ವಿಕಾಸವಾಗುತ್ತದೆ ಎಂಬ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನವನ್ನು ಬರೆದಿದ್ದೇನೆ.

ನಾ. ಡಿಸೋಜ ಅವರ 'ದ್ವೀಪ' ಕನ್ನಡ ಸಾಹಿತ್ಯದಲ್ಲಿಯೇ ಅತ್ಯದ್ಭುತ ಪ್ರೇಮ ಕಥೆ. ಪ್ರಸ್ತುತ ಕಥೆಯ ಕಥಾನಾಯಕ ಕೃಷ್ಣಯ್ಯ ಕಥಾ ನಾಯಕಿಯ ಮನೆಯಲ್ಲಿ ಕೆಲಸದಾಳು ಆಗಿರುತ್ತಾನೆ. ಕಥಾನಾಯಕಿ ನಾಗವೇಣಿಯ ತಂದೆ ಕೃಷ್ಣಯ್ಯನನ್ನು ತನ್ನ ಕುಟುಂಬದ ಸದಸ್ಯರ ಹಾಗೆ ನೋಡಿಕೊಳ್ಳುತ್ತಾರೆ. ನಾಗವೇಣಿಗೆ ಕೃಷ್ಣಯ್ಯನ ಮೇಲೆ ಅಪ್ರತಿಮ ಪ್ರೇಮವಿದ್ದರೂ ಅದನ್ನು ವ್ಯಕ್ತಪಡಿಸಲು ಸಾಧ್ಯವಾಗಿರುವುದಿಲ್ಲ. ನಾಗವೇಣಿಯ ತಂದೆಯ ದುಡುಕು ನಿರ್ಧಾರದಿಂದ ನಾಗವೇಣಿಯ ಮದುವೆ ಗಣಪಯ್ಯರವರೊಡನೆ ನಡೆಯುತ್ತದೆ.

ತನ್ನ ಒಡೆಯರ ಅನುಮತಿಯ ಮೇರೆಗೆ ನಾಗವೇಣಿಯ ಯೋಗಕ್ಷೇಮವನ್ನು ನೋಡಲು ಹೋದ ಕೃಷ್ಣಯ್ಯನಿಗೆ ತಿಂಗಳುಗಟ್ಟಲೆ ಹೊಸಮನೆ ಹಳ್ಳಿಯಲ್ಲಿಯೇ ಉಳಿಯುವ ಸಂದರ್ಭ ನಿರ್ಮಾಣವಾಗುತ್ತದೆ. ವಿವಾಹ ಪೂರ್ವದಲ್ಲಿ ತನ್ನನ್ನು ನಾಗವೇಣಿ ಪ್ರೀತಿಸುತ್ತಿದ್ದಳೆಂಬ ವಿಚಾರ ತಿಳಿದ ಕೃಷ್ಣಯ್ಯ ಮಮ್ಮಲ ಮರುಗುತ್ತಾನೆ. ನಾಗವೇಣಿ–ಕೃಷ್ಣಯ್ಯರ ಸ್ನೇಹವನ್ನು ಸಹಿಸಲಾಗದ ನಾಗವೇಣಿಯ ಗಂಡ ನಾಗವೇಣಿಯ ಮೇಲೆ ಅನುಮಾನಪಟ್ಟು ಕೃಷ್ಣಯ್ಯನನ್ನು 'ದ್ವೀಪ' ದಿಂದ ಹೊರಹಾಕಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಾನೆ. "ಕೃಷ್ಣಯ್ಯ ಶರಾವತಿ ಹೊಸಮನೆಯ ಸುತ್ತ ಮಡುವಾಗಿ ನಿಲ್ಲದೇ ಇದ್ದಿದ್ದರೆ, ಕಾಡು ಪ್ರಾಣಿಗಳೆಲ್ಲ ಮನೆಯ ಸುತ್ತ ಓಡಾಡದೇ ಇದ್ದಿದ್ದರೆ ಇಷ್ಟು ಹೊತ್ತಿಗೆ ಹೊಸಮನೆ ಹಳ್ಳಿಯಿಂದ ಆತ ಹೊರಟು ಹೋಗಿರುತ್ತಿದ್ದ. ಕೃಷ್ಣಯ್ಯ ಮುಖ್ಯವಾಗಿ ನಾಗವೇಣಿಗಾಗಿ ಉಳಿದ, ಅವಳ ಸುಖ ಸಂತೋಷಕ್ಕಾಗಿ ಉಳಿದ."[16] ನಿಜವಾದ ಪ್ರೇಮಿ ಕಷ್ಟದ ಸನ್ನಿವೇಶದಲ್ಲಿ ಎಂದಿಗೂ ತನ್ನ ಹುಡುಗಿಯನ್ನು ಬಿಟ್ಟು ಹೋಗುವುದಿಲ್ಲ ಎಂಬ ಗಟ್ಟಿ ಸಂದೇಶ 'ದ್ವೀಪ' ಕಥೆಯಲ್ಲಿದೆ. ನಾಗವೇಣಿಗೆ ವಿವಾಹವಾಗಿದ್ದರೂ ಅವಳಿಂದ ಯಾವುದೇ ಪ್ರತಿಫಲದ ಅಪೇಕ್ಷೆ ಇಲ್ಲದೆ ಕೃಷ್ಣಯ್ಯ 'ದ್ವೀಪ' ದಲ್ಲಿ ಉಳಿಯುತ್ತಾನೆ. ಕೃಷ್ಣಯ್ಯನ ನಿಸ್ವಾರ್ಥ ಪ್ರೀತಿ ಓದುಗರ ಗಮನ ಸೆಳೆಯುತ್ತದೆ.

ಉಪಸಂಹಾರ

ಪ್ರಸ್ತುತ ಲೇಖನದಲ್ಲಿ ಪ್ರೀತಿಯ ಮಹತ್ವವನ್ನು ಕುರಿತು ಮಹತ್ವದ ವಿಚಾರಗಳಿವೆ. ನಿಜವಾದ ಪ್ರೀತಿಯ ಸ್ವರೂಪವನ್ನು ಗುರುತಿಸಲಾಗದ ಇಂದಿನ ಯುವ ಪೀಳಿಗೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಮಧ್ಯಮ ವರ್ಗದ ಯುವಕ, ಯವತಿಯರ ಅಭಿವೃದ್ಧಿಗೆ ಪ್ರೀತಿಯೆಂಬುದು ಅಡ್ಡಿಯಾಗಿದೆ. ಪ್ರೀತಿಯಲ್ಲಿ ಸೋತ ಯುವಕ, ಯುವತಿಯರು ಆತ್ಮಹತ್ಯೆಯತ್ತ ಮುಖ ಮಾಡುತ್ತಿದ್ದಾರೆ. ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಬರುವ ಎಲ್ಲ ಕಥೆಗಳ ನಾಯಕರು ಮಧ್ಯಮ ವರ್ಗಕ್ಕೆ, ಕೆಳ ಮಧ್ಯಮ ವರ್ಗಕ್ಕೆ ಸೇರಿದವರು. ನಿಜಜೀವನದಲ್ಲಿ ಭದ್ರತೆಯನ್ನು ಕಾಯ್ದುಕೊಂಡ ನಂತರವಷ್ಟೆ ಪ್ರೀತಿ ಮಾಡಿದರೆ ಅದಕ್ಕೆ ಗೌರವ ದೊರೆಯಲು ಸಾಧ್ಯ.

ಪ್ರಸ್ತುತ ಲೇಖನ ರಚನೆಗೆ ನನ್ನನ್ನು ತೀವ್ರವಾಗಿ ಒತ್ತಾಯಪಡಿಸಿದ ಕನ್ನಡದ ಎರಡು ಮಹತ್ವದ ಕಥೆಗಳ ಬಗ್ಗೆ ನಾನಿಲ್ಲಿ ಹೇಳಲೇಬೇಕು. ಒಂದು ಚದುರಂಗ ಅವರ 'ನಾಲ್ಕು ಮೊಳ ಭೂಮಿ' ಹಾಗೂ ವಿವೇಕ ಶಾನಭಾಗ ಅವರ 'ಜಾಮೀನು ಸಾಹೇಬ' ಕಥೆಗಳು ನನ್ನನ್ನು ತೀವ್ರವಾಗಿ ಕಾಡಿವೆ. 'ನಾಲ್ಕು ಮೊಳ ಭೂಮಿ' ಕಥೆಯ ನಿರೂಪಕ ವೃತ್ತಿಯಲ್ಲಿ ವಕೀಲ. ಕಥೆಗಳನ್ನು ಬರೆಯುವ ತನ್ನ ಹೆಂಡತಿ ಲಲಿತಾಳನ್ನು ಗೌರವದಿಂದ ಕಾಣುತ್ತಾನೆ. ಕೆಲ ದಿನಗಳ ನಂತರ ಲಲಿತೆ ಆಕೆಯ ಸೋದರಮಾವ ಸಂಜೀವಿ ಬರೆದ ಕಥೆಗಳನ್ನು ಪ್ರಕಟಿಸುತ್ತಿದ್ದಾಳೆಂಬ ವಿಚಾರ ತಿಳಿಯುತ್ತದೆ. ಲಲಿತಾಳನ್ನು ವಿವಾಹ ಪೂರ್ವದಲ್ಲಿ ಆಕೆಯ ಸೋದರಮಾವ ಸಂಜೀವ

ಪ್ರೀತಿಸುತ್ತಿದ್ದನೆಂಬ ವಿಚಾರ ತಿಳಿದ ನಂತರವೂ ನಿರೂಪಕರು ತಮ್ಮ ಹೆಂಡತಿ ಲಲಿತಾಳನ್ನು ಗೌರವದಿಂದ ಕಾಣುತ್ತಾರೆ.

ವಿವೇಕ ಶಾನಭಾಗರ 'ಜಾಮೀನು ಸಾಹೇಬ' ವಿಭಿನ್ನ ಪ್ರೇಮ ಕಥೆ. ಹಣಕ್ಕಾಗಿ ಮಾನವೀಯತೆಯನ್ನು ಕಳೆದುಕೊಳ್ಳುವ ದುರಂತ ಚಿತ್ರಣವನ್ನು ಕಥೆಯಲ್ಲಿ ಕಾಣಬಹುದು. ಪ್ರಸ್ತುತ ಕಥೆಯಲ್ಲಿ ಶೀನ ಎಂಬ ವ್ಯಕ್ತಿ ಹೆಂಡತಿ, ಮಕ್ಕಳನ್ನು ಕೊಲೆ ಮಾಡಲು ಪ್ರಯತ್ನಿಸಿದ ಎಂದು ಆಕೆಯ ಹೆಂಡತಿ ಲಕ್ಷ್ಮಿ ನೀಡಿದ ದೂರಿನ ಮೇಲೆ ಬಂಧಿಸಲಾಗಿರುತ್ತದೆ. ಶೀನನ ಪೂರ್ವಾಪರವನ್ನು ತಿಳಿಯದ ದಯಾನಂದ ಹಣದಾಸೆಗೆ ಜಾಮೀನಿನ ಮೇಲೆ ಶೀನನನ್ನು ಹೊರತರುತ್ತಾನೆ. ಶೀನ ಬಿಡುಗಡೆಯಾದ ನಂತರ ತನ್ನ ತಾಯಿಯಿಂದ ಭೀಕರ ಸತ್ಯ ತಿಳಿಯುತ್ತದೆ. ಶೀನ ಬೇರೆ ಯಾರೂ ಆಗಿರದೇ ತನ್ನ ಬಾಲ್ಯ ಸ್ನೇಹಿತೆ ಲಕ್ಷ್ಮಿಯ ಪತಿಯಾಗಿರುತ್ತಾನೆ. 'ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ' ಎಂಬ ಗಾದೆ ಮಾತಿನಂತೆ ತನ್ನ ಸ್ನೇಹಿತೆಯ ಬಾಳನ್ನು ಹಾಳು ಮಾಡಿದೆನಲ್ಲ ಎಂದು ಮಮ್ಮಲ ಮರುಗುತ್ತಾನೆ. ಮೇಲ್ಕಂಡ ಎರಡು ಪ್ರೇಮ ಕಥೆಗಳು ಪೂರ್ಣ ಪ್ರಮಾಣದ ಪ್ರೇಮ ಕಥೆಗಳಾಗಿಲ್ಲದ ಕಾರಣದಿಂದ ಪ್ರಸ್ತುತ ಲೇಖನದ ವ್ಯಾಪ್ತಿಯಲ್ಲಿ ತರಲು ಸಾಧ್ಯವಾಗಿಲ್ಲ. ಡಾ.ರಾಜಕುಮಾರ್ ರವರ 'ನಾ ನಿನ್ನ ಮರೆಯಲಾರೆ' ಸಿನಿಮಾ ಎ.ಆರ್. ಆನಂದ ಅವರ 'ನಾನೂ ನೀನೂ ಜೋಡಿ' ಕಥೆಯನ್ನು ಅನುಲಕ್ಷಿಸಿ ನಿರ್ಮಿಸಿರುವ ಸಿನಿಮಾ. 'ನಾನೂ ನೀನೂ ಜೋಡಿ' ಕನ್ನಡದ ಯಶಸ್ವಿ ಪ್ರೇಮ ಕಥೆಗಳಲ್ಲೊಂದು. ಕಥೆಯ ಹಸ್ತಪ್ರತಿ ಲಭ್ಯವಾಗದ ಕಾರಣದಿಂದ ಕಥೆಯನ್ನು ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ತರಲು ಸಾಧ್ಯವಾಗಿಲ್ಲ.

ನಿಜವಾದ ಪ್ರೀತಿಯಲ್ಲಿ ಪ್ರತಿಫಲದ ಅಪೇಕ್ಷೆ ಇರುವುದಿಲ್ಲ. ನಿಜವಾದ ಪ್ರೀತಿಗೆ ಕಾಮ ದೃಷ್ಟಿ ಇರುವುದಿಲ್ಲ ಎಂಬ ನನ್ನ ಮನಸ್ಸಿನ ತತ್ವದ ಆಧಾರದ ಮೇಲೆ ಈ ಲೇಖನ ಬರೆದಿದ್ದೇನೆ.

**ಕೊನೆಟಿಪ್ಪಣಿಗಳು**

1. ಕುವೆಂಪು. (2016). *ನನ್ನ ದೇವರು ಮತ್ತು ಇತರ ಕಥೆಗಳು.* ಪುಟ.47
2. ಅದೇ. ಪುಟ.49
3. ಅಮೂರ ಜಿ. ಎಸ್. (2004). *ಸ್ವಾತಂತ್ರ್ಯೋತ್ತರ ಕನ್ನಡ ಕಥಾ ಲೋಕ.* ಪುಟ.18
4. ನಾಯಕ, ಜಿ. ಎಚ್. (2018). *ಕನ್ನಡ ಸಣ್ಣ ಕಥೆಗಳು.* ಪುಟ.15
5. ಅದೇ. ಪುಟ.333
6. ವೀರಭದ್ರಪ್ಪ, ಕುಂ. (1999). *ಡೋಮ ಮತ್ತು ಇತರ ಕಥೆಗಳು.* ಪುಟ.102
7. ಅದೇ. ಪುಟ, 103, 104
8. ಅದೇ. ಪುಟ.116
9. ಅದೇ. ಪುಟ.111
10. ಭೈರಮಂಗಲ ರಾಮೇಗೌಡ ಹಾಗೂ ಕಂನಾಡಿಗಾ ನಾರಾಯಣ. (2011). *ವರ್ತಮಾನದ ಕಥೆಗಳು.* ಪುಟ.436
11. ಬೆಸಗರಹಳ್ಳಿ ರಾಮಣ್ಣ. (2011). *ಕಣಜ.* ಪುಟ.569
12. ಅದೇ. ಪುಟ.237
13. ಗೀತಾ ನಾಗಭೂಷಣ. (2020). *ಅವ್ವ ಮತ್ತು ಇತರ ಕಥೆಗಳು.* ಪುಟ. 84
14. ಅದೇ. ಪುಟ.102
15. ನಾರಾಯಣ, ಕೆ. ವಿ. (2012). *ಪ್ರೀತಿಸುವುದೆಂದರೆ.* ಪುಟ. 123
16. ಡಿಸೋಜ, ನಾ. (2015). *ದ್ವೀಪ.* ಪುಟ.83

**ಆಕರ ಗ್ರಂಥಗಳು**


- ಅಮೂರ, ಜಿ.ಎಸ್. (2004). *ಸ್ವಾತಂತ್ರ್ಯೋತ್ತರ ಕನ್ನಡ ಕಥಾ ಲೋಕ.* ಪ್ರಿಯದರ್ಶಿನಿ ಪ್ರಕಾಶನ.
- ಭೈರಮಂಗಲ ರಾಮೇಗೌಡ & ಕಂನಾಡಿಗಾ ನಾರಾಯಣ. (2011). *ವರ್ತಮಾನದ ಕಥೆಗಳು.* ಕನ್ನಡ ಸಾಹಿತ್ಯ ಪರಿಷತ್ತು.

- ಬೆಸಗರಹಳ್ಳಿ ರಾಮಣ್ಣ. (2012). *ಕಣಜ.* ಲೋಹಿಯಾ ಪ್ರಕಾಶನ.
- ಡಿಸೋಜ, ನಾ. (2018). *ದ್ವೀಪ.* ಕನ್ನಡ ಸಾಹಿತ್ಯ ಪರಿಷತ್ತು.
- ಕುವೆಂಪು. (2016). *ನನ್ನ ದೇವರು ಮತ್ತು ಇತರ ಕಥೆಗಳು.* ಉದಯ ರವಿ ಪ್ರಕಾಶನ.
- ನಾರಾಯಣ, ಕೆ. ವಿ. (2012). *ಪ್ರೀತಿಸುವುದೆಂದರೆ.* ಅಭಿನವ ಪ್ರಕಾಶನ.
- ನಾಯಕ, ಜಿ. ಹೆಚ್. (2018). *ಕನ್ನಡ ಸಣ್ಣ ಕಥೆಗಳು.* ನ್ಯಾಷನಲ್ ಬುಕ್ ಟ್ರಸ್ಟ್.
- ವೀರಭದ್ರಪ್ಪ, ಕುಂ. (1999). ಡೋಮ ಮತ್ತು ಇತರ ಕಥೆಗಳು, ಲೋಹಿಯಾ ಪ್ರಕಾಶನ.